ಮೂಡುಗಡ್ಡೆ ಪಟ್ಟಣದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯನ್ನು ಕನ್ನಡ ಮಾದರಿ ಶಾಲೆಯಾಗಿ ಪರಿವರ್ತಿಸಿದೆ. ಆದರೆ, ಮುಡುಶೆಡ್ಡೆಯಲ್ಲಿನ ಶಾಲೆಯ ಬಗ್ಗೆ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಪರಿಗಣಿಸಿರುವುದಿಲ್ಲ.

ಇ) 1) ಮಾದರಿ ಶಾಲೆಯಾಗಿ ಪರಿವರ್ತನೆಗೊಳ್ಳುವ ಶಾಲೆಯೂ ಸಾಧ್ಯವಾದಷ್ಟು ಮಟ್ಟಿಗೆ ಕೇಂದ್ರ ಸ್ಥಳದಲ್ಲಿರಬೇಕು. ಮತ್ತು ಶಾಲೆಯು 1 ರಿಂದ 7ನೇ ತರಗತಿಗಳನ್ನು ಹೊಂದಿರಬೇಕು.

2) ಶಾಲೆಯನ್ನು ಆರಿಸುವಾಗ 8 ಮತ್ತು ಇನ್ನೂ ಹೆಚ್ಚಿನ ಶಿಕ್ಷಕರ ಹುದ್ದೆಗಳು ಮಂಜೂರಾಗಿರುವ ಶಾಲೆಗಳನ್ನು ಆರಿಸುವುದು.

3) ಶಾಲೆಯಲ್ಲಿ ಸಾಕಷ್ಟು ಕೊಠಡಿಗಳಿರಬೇಕು. ಮತ್ತು ಆಟದ ಮೈದಾನ, ನೀರಿನ ಸೌಕರ್ಯ, ಶೌಚಾಲಯ ಅನುಕೂಲತೆ, ಶಾಲಾ ತೋಟ ಅಭಿವೃದ್ಧಿ ಪಡಿಸಲು ಹಾಗೂ ಅಗತ್ಯವಿರುವ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲು ಸಾಕಷ್ಟು ಸ್ಥಳಾವಕಾಶವಿರಬೇಕು.

ಈ) ಹಾಲಿ ಸರ್ಕಾರದ ನೀತಿಯಂತೆ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೊಂದರಂತೆ ಮಾದರಿ ಪ್ರಾಥಮಿಕ ಶಾಲೆ ತೆರೆಯಲು ಅವಕಾಶವಿದೆ. ಆದರೆ, ಈಗಾಗಲೇ ಸದರಿ ಕ್ಷೇತ್ರದಲ್ಲಿ ಶಾಲೆ ತೆರೆದಿರುವುದರಿಂದ ಮತ್ತೊಂದು ಶಾಲೆ ತೆರೆಯಲು ಅವಕಾಶವಿರುವುದಿಲ್ಲ.

**ಸುದ್ದಗುಂಟೆ ಪಾಳ್ಯದಲ್ಲಿರುವ ಕ್ರೈಸ್ತ ಕನ್ನಡ ಪ್ರಾಥಮಿಕ ಶಾಲೆ**

575 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಬೆಂಗಳೂರು ನಗರದ ಪ್ರದೇಶದಲ್ಲಿನ ಸುದ್ದಗುಂಟೆ ಪಾಳ್ಯದಲ್ಲಿರುವ ಕ್ರೈಸ್ತ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗೆ ಸರ್ಕಾರದವರು ಎಂದು ಅನುಮತಿ ನೀಡಿದರು?*

*ಆ) ಈ ಶಾಲೆಗೆ ಸರ್ಕಾರದವರು ಅನುದಾನವನ್ನು ನೀಡುತ್ತಿರುವರೇ?*

*ಇ) ಹಾಗಿದ್ದಲ್ಲಿ ಕಾರಣಗಳೇನು?*

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಈ ಶಾಲೆಯನ್ನು 1985-86ನೇ ಸಾಲಿನಿಂದ ಪ್ರಾರಂಭಿಸಲು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಇವರು ದಿನಾಂಕ: 21-3-1986 ರಂದು ಅನುಮತಿ ನೀಡಿರುತ್ತಾರೆ.

ಆ) -ಇಲ್ಲ-

ಇ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸದರಿ ವೆಚ್ಚಕ್ಕೆ ಆಯವ್ಯಯದಲ್ಲಿ ಹಣದ ಕೊರತೆ ಇರುವುದರಿಂದ ಈ ಶಾಲೆಗೆ ಅನುದಾನವನ್ನು ಇನ್ನೂ ನೀಡಿರುವುದಿಲ್ಲ.

**ಹುಬ್ಬಳ್ಳಿ ನಗರದಲ್ಲಿ ಕಾಲೇಜು ಪ್ರವೇಶಕ್ಕೆ ವಂತಿಗೆ**

339 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ ನಗರದಲ್ಲಿ ಈ ವರ್ಷ ಕಾಲೇಜು ಪ್ರದೇಶಕ್ಕೆ ಡೊನೇಷನ್ ಹಾವಳಿ ಮಿತಿ ಮೀರಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಬಂದಿದ್ದರೆ, ಅದರ ನಿವಾರಣೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

**ಹುಬ್ಬಳ್ಳಿ ನಗರದಲ್ಲಿ ಇರುವ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆ**

341 - ಶ್ರೀ ಜಗದೀಶ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ ನಗರದಲ್ಲಿ ಇರುವ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?*

*ಆ) ಈ ನಗರದಲ್ಲಿ ಇನ್ನೂ ಹೆಚ್ಚಿನ ಶಾಲೆಗಳನ್ನು ಪ್ರಾರಂಭಿಸಲು ಸಾರ್ವಜನಿಕರಿಂದ ಬೇಡಿಕೆ ಬಂದಿರುವುದು ನಿಜವೇ?*

*ಇ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?*

ಶ್ರೀ ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

| ಸರ್ಕಾರಿ | | ಖಾಸಗಿ | |
|---|---|---|---|
| ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ |
| 01 | 04 | 31 | 23 |

ಆ) ಹೌದು, ಈ ಕೆಳಕಂಡಂತೆ ಪ್ರಸ್ತಾವನೆಗಳು ಬಂದಿರುತ್ತವೆ.

| ಪ್ರೌಢ | ಪ್ರಾಥಮಿಕ | ಪ್ರೌಢ | ಪ್ರಾಥಮಿಕ |
|---|---|---|---|
| 01 | 01 | 03 | - |

ಇ) ಸರ್ಕಾರಿ ಶಾಲೆಗಳ ಮಂಜೂರಾತಿಯ ಬಗ್ಗೆ ಹಣದ ಲಭ್ಯತೆಯನ್ನಾಧರಿಸಿ ಪರಿಶೀಲಿಸಲಾಗುತ್ತಿದೆ.

ಖಾಸಗಿ ಪ್ರೌಢಶಾಲೆಗಳನ್ನು ತೆರೆಯುವ ಪ್ರಸ್ತಾವನೆಗಳನ್ನು ಸರ್ಕಾರಿ ಮಾರ್ಗಸೂಚಿಗಳನ್ವಯ ಪರಿಶೀಲಿಸಿದ್ದು, ಅವಶ್ಯಕತೆಗಳನ್ನು ಪೂರೈಸದಿದ್ದುರಿಂದ ಪರಿಗಣಿಸಿರುವುದಿಲ್ಲ.

**ಹುಬ್ಬಳ್ಳಿ ನಗರ ಮತ್ತು ಗ್ರಾಮೀಣ ಕ್ಷೇತ್ರದಲ್ಲಿ ಇರತಕ್ಕ ವ್ಯಾಯಾಮ ಗರಡಿ ಮನೆಗಳು**

338 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ ನಗರ ಮತ್ತು ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಇರತಕ್ಕ ವ್ಯಾಯಾಮ ಶಾಲೆ ಮತ್ತು ಗರಡಿ ಮನೆಗಳ ಸಂಖ್ಯೆ ಎಷ್ಟು?*

*ಆ) ಸದರಿ ವ್ಯಾಯಾಮ ಶಾಲೆ ಹಾಗೂ ಗರಡಿ ಮನೆಗಳ ಪ್ರೋತ್ಸಾಹಕ್ಕಾಗಿ ಸರ್ಕಾರದವರು ಸಹಾಯಧನವೇನಾದರೂ ನೀಡುತ್ತಿರುವರೆ?*

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ)

| | ವ್ಯಾಯಾಮ ಶಾಲೆ | ಗರಡಿ ಮನೆ |
|---|---|---|
| ಹುಬ್ಬಳ್ಳಿ ನಗರ | 5 | - |
| ಹುಬ್ಬಳ್ಳಿ ಗ್ರಾಮೀಣ | - | 5 |